ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 20/09/2017


### ಎಸಿಎಸ್ ನೇತೃತ್ವದ ಸಮಿತಿ ರಚನೆ | ಪ್ರತ್ಯೇಕ ವೃಂದ ನೇಮಕಾತಿ ನಿಯಮಕ್ಕೆ ತೀರ್ಮಾನ

# ಬಡ್ತಿ ಕಿತ್ತಾಟಕ್ಕೆ ಇಲಾಖಾ ವಿಭಜನೆ ಸೂತ್ರ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು 20/9/17

ಬಡ್ತಿ ಪಡೆಯುವ ಉದ್ದೇಶಕ್ಕಾಗಿಯೇ ಬೇರೆ ಇಲಾಖೆಗಳಿಗೆ ನೆಗೆಯುತ್ತಿದ್ದ ಇಂಜಿನಿಯರ್‌ಗಳನ್ನು ಒಂದು ಇಲಾಖೆಗೆ ಸೀಮಿತಗೊಳಿಸಲು ಸರ್ಕಾರ ಇಲಾಖಾ 'ವಿಭಜನೆ' ಸೂತ್ರ ರೂಪಿಸುತ್ತಿದೆ. ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಜಲಸಂಪನ್ಮೂಲ ಇಲಾಖೆಗಳಲ್ಲಿ ಇಂಜಿನಿಯರ್‌ಗಳಿಗೆ ಪ್ರತ್ಯೇಕ ವೃಂದ ನೇಮಕಾತಿ ನಿಯಮ ರಚಿಸಲು ತೀರ್ಮಾನಿಸಲಾಗಿದೆ.

ಇಂಜಿನಿಯರ್‌ಗಳಿಗೆ ಲೋಕೋಪಯೋಗಿ ಮಾತೃ ಇಲಾಖೆ. ಬಹುಕಾಲದಿಂದಲೂ ವಿವಿಧ ಶ್ರೇಣಿಯ ಇಂಜಿನಿಯರ್‌ಗಳನ್ನು ಈ ಇಲಾಖೆ ನೇಮಿಸಿಕೊಂಡು ಜಲಸಂಪನ್ಮೂಲ, ನಗರಾಭಿವೃದ್ಧಿ, ಪಂಚಾಯತ್ ರಾಜ್ ಸೇರಿ ವಿವಿಧ ನಿಗಮ ಮಂಡಳಿಗಳಿಗೆ ಕಳುಹಿಸಿಕೊಡುತ್ತಿತ್ತು. ಆದರೆ, ಸಹಾಯಕ ಕಾರ್ಯಪಾಲಕ ಅಭಿಯಂತರ, ಕಾರ್ಯಪಾಲಕ ಅಭಿಯಂತರ, ಅಧೀಕ್ಷಕ ಅಭಿಯಂತರರು ಯಾವುದೇ ಇಲಾಖೆಯಲ್ಲಿ ಸ್ಥಳ ನಿಯುಕ್ತಿಗೊಂಡರೂ ಲೋಕೋಪಯೋಗಿ ಇಲಾಖೆಯ ಸಂಯುಕ್ತ ಜ್ಯೇಷ್ಠತಾ ಪಟ್ಟಿಯಲ್ಲೇ ಜ್ಯೇಷ್ಠತೆ ಕಂಡುಕೊಳ್ಳುತ್ತಿದ್ದರು. ಇತ್ತೀಚೆಗೆ ವಿವಿಧ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ವಿವಿಧ ಶ್ರೇಣಿ ಇಂಜಿನಿಯರ್‌ಗಳು ಆಯಾ ಇಲಾಖೆಯಲ್ಲೇ ಹೊಸ ಜ್ಯೇಷ್ಠಾತಪಟ್ಟಿ ಸೃಷ್ಟಿಸಿ ಬಡ್ತಿ ಪಡೆದುಕೊಳ್ಳಲು ರಾಜಕೀಯವಾಗಿ ಪ್ರಯತ್ನಿಸಿದ್ದರು. ಇದರಿಂದ ಮಾತೃ ಇಲಾಖೆಯ ಇಂಜಿನಿಯರ್‌ಗಳ ಸಂಘ ಅಸಮಾಧಾನ ವ್ಯಕ್ತಪಡಿಸಿ, ಸರ್ಕಾರಕ್ಕೆ ದೂರು ನೀಡಿತ್ತು. ಈವರೆಗೆ ಸಂಯುಕ್ತ ಜ್ಯೇಷ್ಠತೆಯಲ್ಲಿದ್ದವರು ಬಡ್ತಿ ಉದ್ದೇಶಕ್ಕಾಗಿಯೇ ಬೇರೆ ಇಲಾಖೆಗೆ ನಿಯೋಜನೆ ಹೊಂದಿ ಅಲ್ಲಿ ಬಡ್ತಿ ಪಡೆದರೆ ಹಿರಿತನ ಕಡಗಣನೆಯಾದಂತಾಗುತ್ತದೆ. ಲೋಕೋಪಯೋಗಿ ಇಲಾಖೆಯಲ್ಲಿದ್ದವರಿಗೆ ಅನ್ಯಾಯವಾಗಲಿದೆ ಎಂಬ ದೂರಿತ್ತು. ಈ ಇಲಾಖೆಯಿಂದ ಮತ್ತೊಂದು ಇಲಾಖೆಯಲ್ಲೇ ಕಾರ್ಯನಿರ್ವಹಿಸುವುದಾಗಿ ಕೆಲವು ಇಂಜಿನಿಯರ್‌ಗಳು ಇಚ್ಛಾಪತ್ರ ಕೊಟ್ಟಿದ್ದು, ಆ ಬಗ್ಗೆ ಸರ್ಕಾರದ ಹಂತದಲ್ಲಿ ತೀರ್ಮಾನವಾಗಿಲ್ಲ. ಹಾಗಾಗಿ ತಕ್ಷಣಕ್ಕೆ ನಡೆಯಬಹುದಾದ ಪದೋನ್ನತಿ ಪ್ರಕ್ರಿಯೆ ತಡೆ ಹಿಡಿಯಬೇಕೆಂಬ ಒತ್ತಾಯ ಬಂದಿತ್ತು. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಪದೋನ್ನತಿ ನೀಡಲು ಸಭೆ ಕೂಡ ನಿಶ್ಚಯವಾಗಿತ್ತು. ಉನ್ನತ ಅಧಿಕಾರಿಗಳ ಸಭೆ ನಡೆದು, ಅಪರ ಮುಖ್ಯಕಾರ್ಯದರ್ಶಿ ನೇತೃತ್ವದ ಸಮಿತಿ ರಚಿಸಿ, ಸಮಸ್ಯೆ ಪರಿಹಾರಕ್ಕೆ ಆಗಬೇಕಾದ ಕ್ರಮಗಳ ಬಗ್ಗೆ ವರದಿಯನ್ನು ಸಂಪುಟ ಸಭೆಗೆ ನೀಡಲು ನಿರ್ಧರಿಸಲಾಗಿದೆ. ಇಂಜಿನಿಯರ್‌ಗಳ ವಿಚಾರದಲ್ಲಿ ಇಲಾಖೆ ವಿಭಜನೆ ಆದರೆ ಸಮಸ್ಯೆಗೆ ಪರಿಹಾರ ಸಿಗಲಿದೆ. ಈ ಕಾರಣಕ್ಕೆ ಜಲಸಂಪನ್ಮೂಲ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ವೃಂದ ಮತ್ತು ನೇಮಕ ನಿಯಮಗಳಿಗೆ ತಿದ್ದುಪಡಿ ಅವಶ್ಯಕತೆ ಇದೆ. ಇದು ಸಂಪುಟ ಸಭೆಯಲ್ಲಿ ತೀರ್ಮಾನವಾಗಬೇಕಾಗಿದೆ ಎಂದು ಹಿರಿಯ ಅಧಿಕಾರಿ ವಿಜಯವಾಣಿಗೆ ತಿಳಿಸಿದರು. ಅಪರ ಮುಖ್ಯಕಾರ್ಯದರ್ಶಿ ನೇತೃತ್ವದ ಸಮಿತಿ ಇನ್ನೊಂದು ತಿಂಗಳಲ್ಲಿ ಸಂಪುಟಕ್ಕೆ ವರದಿ ಸಲ್ಲಿಸಿ ಅಗತ್ಯ ಕ್ರಮಕ್ಕೆ ಶಿಫಾರಸು ಮಾಡಲಿದೆ. ಅಲ್ಲಿಯವರೆಗೂ ಬಡ್ತಿ ನೀಡಲು ಯಾವುದೇ ಪದೋನ್ನತಿ ಸಭೆ ನಡೆಸದಂತೆ ಅಧಿಕಾರಿಗಳ ಸಭೆಯಲ್ಲೂ ನಿರ್ಣಯಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.



5